ಅನುಭವ ಶುರುವಾಗುತ್ತಿತ್ತು. ಗಳಿಗೆಗೊಮ್ಮೆ ಅವಳ ದೃಷ್ಟಿ ಗಂಡನ ಆಗಮನಕ್ಕಾಗಿ ಕಾತರಿಸುತ್ತಿತ್ತು. ಅವಳ ಫೋಬಿಯಾವನ್ನು ಚೆನ್ನಾಗಿ ಅರಿತ್ತಿದ್ದ ಅವಳ ಗಂಡ, ಅವಳ ತೊಳಲಾಟದಿಂದ ವಿಕೃತ ಸುಖವನ್ನು ಅನುಭವಿಸುತ್ತಾ, ಕೊನೆಗೂ ಲೈಬ್ರೆರಿಯಿಂದ ಹೊರಬರುತ್ತಿದ್ದ. ಕೈಯಲ್ಲಿನ ಗಡಿಯಾರವನ್ನು ನೋಡುತ್ತಾ, 'ಜಾಸ್ತಿ ಟೈಮಿಲ್ಲ ಡಾರ್ಲಿಂಗ್!... ಬೇಗ, ಬೇಗ ಹೊರಡು...' ಎಂದು ಅವಸರಪಡಿಸುತ್ತಿದ್ದ. ಇದನ್ನು ಕೇಳಿಸಿಕೊಂಡಾಗ ಮಿಸೆಸ್ ಫೋಸ್ಟರಳಿಗೆ ದುಃಖ ಉಮ್ಮಳಿಸಿ ಬಂದು ಗಂಟಲು ಕಟ್ಟುತ್ತಿತ್ತು.

ಮಿಸೆಸ್ ಫೋಸ್ಟರಳ ಈ ಫೋಬಿಯಾ ಅವಳ ಗಂಡನಿಗೆ ಕಿರಿಕಿರಿಯುಂಟುಮಾಡಿರುವುದು ನಿಜವಾಗಿದ್ದರೂ ಅವಳ ಗಾಯಕ್ಕೆ ಉಪ್ಪು ಸವರಿ ಖುಷಿಪಡುವುದು ಮಾತ್ರ ಅಕ್ಷಮ್ಯ ಮತ್ತು ಮರೆತುಬಿಡುವಂತ ವಿಚಾರವಾಗಿರಲಿಲ್ಲ. ಪ್ರತಿಬಾರಿಯೂ ಎಲ್ಲಾದರೂ ಹೊರಡುತ್ತಿರುವಾಗ ಮಿಸ್ಟರ್ ಫೋಸ್ಟರ್ ಬೇಕಂತಲೇ ತಡಮಾಡುತ್ತಾ ಹೆಂಡತಿ ಮಾನಸಿಕವಾಗಿ ಅನುಭವಿಸುತ್ತಿದ್ದ ಚಿತ್ರಹಿಂಸೆಯನ್ನು ನೋಡಿ ವಿಕೃತ ಸಂತೋಷ ಅನುಭವಿಸುತ್ತಿದ್ದ. ಅವಳು ಸ್ವತಂತ್ರಳಾಗಿ ಏನೂ ಮಾಡಲಾಗದ, ಪ್ರತಿಭಟಿಸಲೂ ಆಗದ ಪಾಪದ ಹೆಂಗಸಾಗಿದ್ದಳು. ಅವನನ್ನು ಬೇಗ ಹೊರಡಿಸುವ ಧೈರ್ಯ ಅವಳಿಗೆ ಇರಲಿಲ್ಲ. ಇದನ್ನು ಅವನು ಚೆನ್ನಾಗಿ ಅರಿತಿದ್ದ. ಈ ಮೊದಲೇ ಅವನು ಅವಳನ್ನು ಪಳಗಿಸಿದ್ದ. ಇಷ್ಟು ವರ್ಷಗಳ ನಂತರವೂ, ಜೀವನದ ಸಂಧ್ಯಾಕಾಲದಲ್ಲಿ ಕೂಡ ಮಿಸ್ಟರ್ ಫೋಸ್ಟರ್ ಹೆಂಡತಿಗೆ ಕಾಡುವುದನ್ನು ಬಿಟ್ಟಿರಲಿಲ್ಲ.

ಈ ಮಧ್ಯೆಯೂ ಮಿಸೆಸ್ ಫೋಸ್ಟರ್ ಒಬ್ಬ ಆದರ್ಶ ಗೃಹಿಣಿಯಾಗಿದ್ದಳು. ಮೂವತ್ತು ವರ್ಷಗಳ ದಾಂಪತ್ಯ ಜೀವನದಲ್ಲಿ ಯಾವುದೇ ಪೂರ್ವ ಶರತ್ತುಗಳಿಲ್ಲದೆ ಅವನ ಸೇವೆ ಮಾಡಿದ್ದಳು. ಇದರಲ್ಲಿ ಯಾವುದೇ ಸಂಶಯಗಳಿರಲಿಲ್ಲ. ಆಕೆ ಒಬ್ಬ ಮುಗ್ಧ ಮತ್ತು ಸಾಧು ಸ್ವಭಾವದ ಹೆಂಗಸಾಗಿದ್ದಳು. ಈ ವರೆಗೆ ಗಂಡನ ಚಿತ್ರಹಿಂಸೆಯನ್ನು ಹಿಂಸೆ ಎಂದು ಭಾವಿಸಿಕೊಂಡವಳೇ ಅಲ್ಲ. ತನ್ನ ಸ್ವಭಾವಕ್ಕಿಂತ ಗಂಡನದು ವಿರೋಧ ಸ್ವಭಾವ ಅಷ್ಟೇ ಎಂದು ಸಂಭಾಳಿಸಿಕೊಂಡು ನಡೆಯುತ್ತಿದ್ದಳು. ಆದರೆ ಇತ್ತೀಚಿನ ದಿನಗಳಲ್ಲಿ ಯಾಕೋ ತನ್ನ ಗಂಡನ ಸ್ವಭಾವ ಅವಳಿಗೆ ಸರಿ ಬರುತ್ತಿರಲಿಲ್ಲ.

ಸ್ಥಿತಿವಂತರಾಗಿದ್ದ ಮಿಸ್ಟರ್ ಫೋಸ್ಟರ್, ಮಡದಿಯೊಂದಿಗೆ ನ್ಯೂಯಾರ್ಕಿನಲ್ಲಿ ವಾಸಮಾಡುತ್ತಿದ್ದರು. ಅವರಿಗೆ ಸುಮಾರು ಎಪ್ಪತ್ತು ವರ್ಷ ವಯಸ್ಸಾಗಿತ್ತು. ಅವರ ಮನೆಯಲ್ಲಿ ನಾಲ್ಕು ಜನ ನೌಕರರು ಕೆಲಸ ಮಾಡುತ್ತಿದ್ದರಾದರೂ ಅವರನ್ನು ಕಾಣಲು ಬರುತ್ತಿದ್ದವರು ಬಲು ಅಪರೂಪ. ಆದರೆ, ಜನವರಿ ತಿಂಗಳಿನ ಈ ದಿನ, ಫೋಸ್ಟರರ ಮನೆಯಲ್ಲಿ ಗಡಿಬಿಡಿ. ಒಬ್ಬ ಕೆಲಸದವಳು ಪ್ರತಿರೂಮಿನಲ್ಲಿ ಪ್ಲಾಸ್ಟಿಕ್ ಹಾಳೆಗಳನ್ನು ತಂದು



ಚಿತ್ರಗಳು: ಸೃಜನ್